
ಜೈಲಿನಲ್ಲಿದ್ದೇ ಕಾದಂಬರಿ ಬರೆದರು. ಬಿಡುಗಡೆಯಾದ ಬಳಿಕ ದೇಶ ಬಿಟ್ಟು ಹೋಗಿಬಿಟ್ಟರು.

◆ **ನಿಮ್ಮ ಪೂರ್ವಜರು ಕೀನ್ಯಾಕ್ಕೆ ಯಾವಾಗ ಹೋದರು?**

ನಮ್ಮ ಹಿರೀಕರು ಪಂಜಾಬಿಗಳು. ಈಗ ಪಾಕಿಸ್ತಾನದ ಭಾಗವಾಗಿರುವ ಗುಜ್ರನ್‌ವಾಲಾದವರು. ಅಜ್ಜ ಶಾಮದಾಸ್ ಬೂಟಾಮಲ್ ಹೋರ, 1890ರಲ್ಲಿ ಕೀನ್ಯಾಕ್ಕೆ ಹೋದರು. ಆಗ ಬ್ರಿಟಿಷರು ಕೀನ್ಯಾದ ಮೊಂಬಾಸ ಬಂದರು ಪಟ್ಟಣದಿಂದ ಯುಗಾಂಡಾ ತನಕ ರೈಲ್ವೆಹಳಿ ಹಾಕಲು ಕೆಲಸಗಾರರನ್ನು ಹುಡುಕುತ್ತಿದ್ದರು. ಸ್ಥಳೀಯ ಆಫ್ರಿಕನ್ನರಿಗೆ ರೈಲ್ವೆ ಕೆಲಸ ಮಾಡಲು ಭಾರತೀಯರಿಗೆ ಇರುವ ತರಬೇತಿ ಇರಲಿಲ್ಲ. ಅಜ್ಜ, ಸ್ಟೇಷನ್ ಮಾಸ್ತರನ ಕೆಲಸಕ್ಕೆ ಅರ್ಜಿ ಹಾಕಿದ್ದರು. ಕೆಲಸ ಸಿಕ್ಕಿತು. ನಿವೃತ್ತಿಯಾದ ಬಳಿಕ ನೈರೋಬಿಯಲ್ಲಿ ನೆಲೆಸಿ, ಪ್ರಿಂಟಿಂಗ್ ಪ್ರೆಸ್ ಹಾಕಿದರು.

◆ **ಕೀನ್ಯಾದಲ್ಲಿ ಭಾರತದ ಯಾವೆಲ್ಲ ಸಮುದಾಯಗಳಿವೆ?**

ಗುಜರಾತಿಗಳು, ಪಂಜಾಬಿಗಳು, ಗೋವನ್ನರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಗುಜರಾತಿಗಳಲ್ಲಿ ಮುಸ್ಲಿಂ



ಅನಿಲ್ ಅವರ ಫೋಟೊಗ್ರಫಿ ಗುರು ರಾಮರಖಾ

ಬೊಹ್ರಾಗಳಿದ್ದಾರೆ. ದಕ್ಷಿಣ ಭಾರತೀಯರು ಕಡಿಮೆ. ಪ್ರತಿಯೊಂದು ಸಮುದಾಯಕ್ಕೂ ತನ್ನದೇ ಕ್ಲಬ್ಬುಗಳಿವೆ. ನನ್ನ ಸ್ನೇಹಿತೆ ಡಾನಾ ಏಪ್ರಿಲ್ ಸೈಡನ್‌ಬರ್ಗ್, ತನ್ನ 'ಮರ್ಕಂಟೈಲ್ ಅಡ್ವೆಂಚರರ್ಸ್: ದಿ ವರ್ಲ್ಡ್ ಆಫ್ ಈಸ್ಟ್ ಆಫ್ರಿಕನ್ ಏಷಿಯನ್ಸ್' ಪುಸ್ತಕದಲ್ಲಿ ಭಾರತೀಯ ವ್ಯಾಪಾರಿಗಳ ಸಾಹಸಗಳ ಬಗ್ಗೆ ಬರೆದಿದ್ದಾಳೆ. ಹೆಚ್ಚಿನ ವ್ಯಾಪಾರಿಗಳು ರಾಜಧಾನಿ ಮೊಂಬಾಸ, ನೈರೋಬಿಗಳಲ್ಲಿ ನೆಲೆಸಿದ್ದಾರೆ.

◆ **ನೈರೋಬಿ ಶಬ್ದದ ಅರ್ಥವೇನು?**

ಇದು ಮಸ್ಸೈ ಭಾಷೆಯ ಶಬ್ದ. ಇದರರ್ಥ ತಂಪು ಪ್ರದೇಶ ಅಂತ. ಬ್ರಿಟಿಷರಿಗೆ ಈ ಜೌಗುಪ್ರದೇಶ ಇಷ್ಟವಾಗಿತ್ತು. ಅಲ್ಲಿದ್ದ ನೀರನ್ನೆಲ್ಲ ಇಂಗಿಸಿ ನಗರ ಕಟ್ಟಿದರು. ಅವರಿಗೆ ಕೀನ್ಯಾದ ದಟ್ಟ ಕಾಡು, ಆಳವಾದ ಕಣಿವೆ ಹಾಗೂ ವನ್ಯಮೃಗಗಳ ದೆಸೆಯಿಂದ ರೈಲ್ವೆಹಳಿ ಹಾಕುವುದು ಸವಾಲಿನ ಕೆಲಸವಾಗಿತ್ತು. ರೈಲ್ವೆ ಕೆಲಸಗಾರರನ್ನು ಟೆಂಟುಗಳಿಗೆ ನುಗ್ಗಿ ಸಿಂಹಗಳು ಎಳೆದುಕೊಂಡು ಹೋಗುತ್ತಿದ್ದವು. ಆಗಲೇ ಬ್ರಿಟಿಷರು ಅವನ್ನು ಕೊಲ್ಲಲು ಶುರುಮಾಡಿದ್ದು. ರೈಲ್ವೆ ಕೆಲಸಗಾರರಿಗೆ ಕೋವಿ ತರಬೇತಿ ಕೊಟ್ಟರು. ನನ್ನಜ್ಜನೂ ಒಂದು ಸಿಂಹವನ್ನು ಕೊಂದನು. ಆಫ್ರಿಕಾದ ಭೀಷಣ ರೋಗರುಜಿನ ಸಹಿಸುತ್ತ, ಮಸ್ಸೈ ಹೋರಾಟಗಾರರ ಪ್ರತಿರೋಧ ಎದುರಿಸುತ್ತ ಭಾರತೀಯರು ರೈಲ್ವೆಲೈನು ಹಾಕಿದರು. ಈ ದುಸ್ಸಾಹಸದಲ್ಲಿ ಬಹಳ ಜನ ಪ್ರಾಣ ಕಳೆದುಕೊಂಡರು. ಈ ಹುಚ್ಚುತನಕ್ಕಾಗಿ ಕೀನ್ಯಾದ ರೈಲ್ವೆಯನ್ನು ವ್ಯಂಗ್ಯವಾಗಿ 'ಲುನ್ಯಾಟಿಕ್ ಎಕ್ಸ್‌ಪ್ರೆಸ್' ಎಂದು ಕರೆಯುವುದುಂಟು.

◆ **ನಿಮ್ಮ ಹೆಸರಿನಲ್ಲಿರುವ ವಿದ್ಯಾರ್ಥಿ ಅಡ್ಡಹೆಸರಿನ ಹಿನ್ನೆಲೆಯೇನು?**

ಅದೊಂದು ಕಥೆ. ಅಪ್ಪನ ಹೆಸರು ಗಿರಿಧರಿ ಲಾಲ್ ಹೋರ. ಅವರು ಮೊಟ್ಟಮೊದಲ ಸಲಕ್ಕೆ ಸೀನಿಯರ್ ಕೇಂಬ್ರಿಜ್ ಪರೀಕ್ಷೆ ಪಾಸಾದ ವರ್ಣೀಯ ವ್ಯಕ್ತಿ. ರಾತ್ರಿಯಿಡೀ ಲ್ಯಾಂಪ್ ಬೆಳಕಲ್ಲಿ ಓದುತ್ತಿದ್ದರಂತೆ. ಗೆಳೆಯರು 'ಏನಪ್ಪಾ ಹೋರಾ, ಇಷ್ಟೊಂದು ಓದುತ್ತಿ? ಓದಿ ಏನಾಗಬೇಕು ಎಂದಿರುವೆ? ನಿನ್ನ ಹೆಸರನ್ನು ವಿದ್ಯಾರ್ಥಿ ಎಂದು ಇಡುತ್ತೇವೆ' ಎಂದರಂತೆ.